# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.

ಸಿ.ಸಿ.ನಂಃ 4585/2021 ಸಿ.ಡಬ್ಲ್ಯೂ –1 ಪಿ.ಡಬ್ಲ್ಯೂ -1

| | | |
|---|---|---|
| ಹೆಸರು | ಃ | ಪ್ರವೀಣಕುಮಾರ |
| ತಂದೆಃ ಗಂಡ | ಃ | ಬಸವರಾಜ ಸಾತನೂರ |
| ವಯಸ್ಸು | ಃ | ೩೮ ವರ್ಷ |
| ಉದ್ಯೋಗ | : | ಆಹಾರ ನಿರೀಕ್ಷಕರು, ಆಳಂದ |
| ವಾಸಸ್ಥಳ | ಃ | ಆಳಂದ |

ದಿನಾಂಕಃ ೧೮.೦೨.೨೦೨೫

ಸತ್ಯ ಪ್ರತಿಜ್ಞೆಯ ಮೇರೆಗೆ

---

## ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ ಃ

ಆರೋಪಿತರ ಪರಿಚಯ ಇರುತ್ತದೆ. ಚಾಸಾ-2 ರಿಂದ 9 ರವರ ಪರಿಚಯ ಇರುತ್ತದೆ.

ದಿ.14.06.2020 ರಂದು ನಾನು ಕರ್ತವ್ಯದಲ್ಲಿದ್ದಾಗ ಆಳಂದ ತಹಸೀಲ್ದಾರವರು ನನಗೆ ಕರೆ ಮಾಡಿ ಕಲಬುರಗಿಯಿಂದ ಉಮರಗಾಕ್ಕೆ ಹೋಗುವ ರಸ್ತೆಯಲ್ಲಿ ಒಂದು ಲಾರಿ ಪಡಿತರ ಚೀಟಿದಾರರಿಗೆ ವಿತರಿಸುವ ಅಕ್ಕಿಗಳನ್ನು ಕಾಳ ಸಂತೆಯಲ್ಲಿ ಕಡಿಮೆ ಬೆಲೆಗೆ ಖರೀದಿ ಮಾಡಿ ತುಂಬಿಕೊಂಡು ಅಕ್ರಮವಾಗಿ ಸಾಗಾಟಣೆ ಮಾಡುತ್ತಿದ್ದಾರೆ ಎಂದು ಬಾತ್ಮಿ ಬಂದಿರುತ್ತದೆ ಎಂದು ಹೇಳಿದರು. ಆಗ ನಾನು, ಚಾಸಾ-೪ ರವರು ತಹಸೀಲ್ದಾರವರು ಕರೆದ ಸ್ಥಳಕ್ಕೆ ಹೋದೆವು. ಅಲ್ಲಿಂದ ಇಬ್ಬರು ಪಂಚರಾದ ಚಾಸಾ-೨ ಮತ್ತು ೩ರವರನ್ನು ಕರೆಸಿದೆವು. ಅವರಿಗೂ ಕೂಡ ಬಾತ್ಮಿ ವಿಷಯವನ್ನು ತಿಳಿಸಿದೆವು. ಅವರು ಒಪ್ಪಿದ ಮೇರೆಗೆ ಒಂದು ಖಾಸಗಿ ವಾಹನದಲ್ಲಿ ನಾನು, ಚಾಸಾ-2 ರಿಂದ 4 ರವರು ಆಳಂದ ಚೆಕಪೋಸ್ಟ ಹತ್ತಿರ ಹೋಗಿ ಸದರಿ ವಾಹನವನ್ನು ವಾಚ್ ಮಾಡುತ್ತಾ ನಿಂತಿದ್ದೆವು. ಆಗ ವಾಹನ ನಂ. ಕೆ.ಎ.32.ಡಿ.0057 ಬಂದಿರುತ್ತದೆ, ಅದನ್ನು ಕೈ ಸನ್ನೆ ಮಾಡಿ ತಡೆದು ನಿಲ್ಲಿಸಿದೆವು. ನಿಲ್ಲಿಸಿದ ನಂತರ ಚಾಲಕನನ್ನು ವಾಹನದಲ್ಲಿ ಏನಿದೆ ಎಂದು ಕೇಳಿದೆವು ಅವನು ಅಕ್ಕಿ ಇದೆ ಎಂದು ಹೇಳಿ ಸ್ಥಳದಿಂದ ಓಡಿ ಹೋದನು. ಆಗ ನಾವು ಸದರಿ ಲಾರಿಗೆ ಹಾಕಿರುವ ತಾಡಪತ್ರಿಯನ್ನು ತೆಗೆದು ನೋಡಿದಾಗ ಅದರಲ್ಲಿ ವಿವಿಧ ಬಣ್ಣದ ಚೀಲಗಳಲ್ಲಿ ತುಂಬಿದ ಅಕ್ಕಿಗಳನ್ನು ನೋಡಿದೆವು. ಅದರಲ್ಲಿ ಒಂದು ಚೀಲವನ್ನು ಉಚ್ಚಿ ನೋಡಿದಾಗ ಅದರಲ್ಲಿ ಪಡಿತರ ಚೀಟಿದಾರರಿಗೆ ವಿತರಿಸುವ ಅಕ್ಕಿಗಳು ಆಗಿದ್ದವು. ನಂತರ ಸದರಿ ವಾಹನವನ್ನು ವೇಬ್ರಿಡ್ಜಗೆ ತೆಗೆದುಕೊಂಡು ಹೋಗಿ ಕಾಟಾ ಮಾಡಿಸಿ ನೋಡಲಾಗಿ ಅದರಲ್ಲಿ 292 ಕ್ವಿಂಟಾಲ್ 50 ಕೆ.ಜಿ. ಅಕ್ಕಿಗಳು ಇದ್ದವು. ಅದರ ಅಂದಾಜು ಮೌಲ್ಯ 4,38,000/- ಆಗುತ್ತದೆ. ಮಳೆ ಬರುತ್ತಿತ್ತು, ಸುರಕ್ಷತೆಯ ದೃಷ್ಟಿಯಿಂದ ಲಾರಿಯನ್ನು ಆಳಂದ ಪೋಲಿಸ್ ಠಾಣೆಗೆ ತಂದು ನಿಲ್ಲಿಸಿದೆವು. ಸದರಿ ಲಾರಿ ಮತ್ತು ಅಕ್ಕಿ ಚೀಲಗಳನ್ನು ಪಂಚರ ಸಮಕ್ಷಮ ಜಪ್ತಿಪಡಿಸಿಕೊಂಡು ನಂತರ ಆಹಾರ ಧಾನ್ಯಗಳನ್ನು ನಮ್ಮ ಗೋಡೌನಗೆ ಸುರಕ್ಷತೆ ದೃಷ್ಟಿಯಿಂದ ಶೇಖರಣೆ ಮಾಡಿದೆವು. ಸದರಿ ಅಕ್ಕಿಗಳನ್ನು ಗೋಡೌನನಲ್ಲಿ ಹಾಕಿ ಗೋಡೌನಿನ ಮ್ಯಾನೇಜರಿಂದ ಸ್ವೀಕೃತಿಯನ್ನು ಪಡೆದುಕೊಂಡೆವು. ನಂತರ ಖಾಲಿ ಲಾರಿಯನ್ನು ತೂಕ ಮಾಡಿ ನೋಡಲಾಗಿ 13 ಕ್ವಿಂಟಾಲ್ ಲಾರಿ ತೂಕವಿತ್ತು, ಸದರಿ ಲಾರಿಯ ಅಂದಾಜು ಮೌಲ್ಯ ರೂ.5 ಲಕ್ಷ ಇರುತ್ತದೆ. ಸದರಿ ಲಾರಿಯನ್ನು ಚೆಕ್ ಮಾಡಿ ನೋಡಲಾಗಿ ಸದರಿ ಲಾರಿಯು ಲಕ್ಷ್ಮಿ ತಿಮ್ಮಪ್ಪ ಟ್ರೇಡಿಂಗ್

ಗುರುಮಿತಕಲ ರವರಿಗೆ ಸಂಬಂಧಿಸಿದ ಅಕ್ಕಿ ಚೀಲಗಳು ಇದ್ದವು. ಆಗ ನಾನು ಲಕ್ಷ್ಮಿ ತಿಮ್ಮಪ್ಪ ಟ್ರೇಡಿಂಗ್ ಗುರುಮಿತಕಲ್ ರವರ ವಿರುದ್ದ, ಓಡಿ ಹೋದ ಚಾಲಕನ ವಿರುದ್ದ ಮತ್ತು ಲಾರಿ ಮಾಲೀಕನ ವಿರುದ್ದ ಫಿರ್ಯಾದಿಯನ್ನು ಸಲ್ಲಿಸಿರುತ್ತೇನೆ. ಸದರಿ ಅಕ್ಕಿಗಳ ಪೈಕಿ ನಾಲ್ಕು ಚೀಲಗಳ ಅಕ್ಕಿಯಿಂದ ನಾಲ್ಕು ಕೆ.ಜಿ. ಅಕ್ಕಿಯನ್ನು ರಾಸಾಯನಿಕ ಪರೀಕ್ಷೆಗಾಗಿ ತೆಗೆದು, ಚಾಸಾ-೨ ಮತ್ತು ೩ ರವರ ಸಮಕ್ಷಮ ಜಪ್ತಿಪಂಚನಾಮೆಯನ್ನು ಜರುಗಿಸಿರುತ್ತೇವೆ. ಸಾಕ್ಷಿ ಜಪ್ತಿ ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಜಪ್ತಿ ಪಂಚನಾಮೆಯನ್ನು ನಿಪಿ-೧ಎಂದು, ಸಹಿಯನ್ನು ನಿಪಿ-೧(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಫಿರ್ಯಾದಿಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುವುದರಿಂದ, ಫಿರ್ಯಾದಿಯನ್ನು ನಿಪಿ-೨ ಎಂದು, ಸಹಿಯನ್ನು ನಿಪಿ-೨(ಎ) ಎಂದು ಗುರುತಿಸಲಾಯಿತು. ಆರೋಪಿಯನ್ನು ನೋಡಿದರೆ ಗುರುತಿಸಲು ಬರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಮುಂದುವರೆದ ಮುಖ್ಯ ವಿಚಾರಣೇಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು)

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.ಆಳಂದ